ಕೊಡುತ್ತೇನೆ' ಎಂದನು. ಮಾವುತನಿಗೆ ನೂರು ರೂಪಾಯಿ ಸೋಮ ಕೊಡುತ್ತೇನೆಂದು ಹೇಳಿದ್ದು ಕೇಳಿ ಅವನ ಕಾಲನ್ನು ಬಿಗಿಯಾಗಿ ಹಿಡಿದುಕೊಂಡನು. ಅಷ್ಟರಲ್ಲೇ ಆನೆಯು ಮಾವುತನನ್ನು ಬಿಟ್ಟು ಮುಂದಕ್ಕೆ ಹೊರಟು ಹೋಯಿತು. ಈಗ ಮರದ ಟೊಂಗೆಯಲ್ಲಿ ಸೋಮ ಮತ್ತು ಅವನ ಕಾಲನ್ನು ಹಿಡಿದುಕೊಂಡ ಮಾವುತ ಇಬ್ಬರಾದರು. ಇಬ್ಬರು ಜೀವ ಭಯದಿಂದ ಇನ್ನೇನು ಮಾಡುವುದು ಎನ್ನುವಷ್ಟರಲ್ಲಿ ಅಲ್ಲಿಗೆ ಒಂಟೆ ಸವಾರಿ ಮಾಡಿಕೊಂಡು ಬರುತ್ತಿರುವ ಒಬ್ಬ ವ್ಯಕ್ತಿಯನ್ನು ಕಂಡರು. ಆಗ ಸೋಮ ಮತ್ತು ಮಾವುತರಿಬ್ಬರು ಅವನ ಸಹಾಯವನ್ನು ಕೇಳಿದರು. ಆಗ ಒಂಟೆ ಸವಾರ ಮಾವುತನ ಕಾಲನ್ನು ಹಿಡಿದುಕೊಂಡನು. ಅಷ್ಟರಲ್ಲೇ ಒಂಟೆಯು ಮುಂದಕ್ಕೆ ಹೊರಟು ಹೋಯಿತು.

ಈಗ ಒಂದೇ ಟೊಂಗೆಯ ಆಶ್ರಯದಲ್ಲಿ ಮೂವರು ಆದರು. ಅದೇ ಸಮಯಕ್ಕೆ ಸರಿಯಾಗಿ ಅಲ್ಲಿಗೊಬ್ಬ ಕುದುರೆ ಸವಾರನು ಬಂದನು. ಟೊಂಗೆಯಲ್ಲಿ ಸಿಕ್ಕಿಕೊಂಡಿರುವ ಮೂವರು ಕುದುರೆ ಸವಾರನಲ್ಲಿ ಸಹಾಯವನ್ನು ಕೇಳಿದರು. ಕುದುರೆ ಸವಾರನು ಅವರ ಪರಿಸ್ಥಿತಿಯನ್ನು ನೋಡಿದನು. ಅಲ್ಲಿ ಯಾರು ಕೈ ಬಿಟ್ಟರು ಹಳ್ಳಕ್ಕೆ ಬಿದ್ದು ಸಾಯುತ್ತಾರೆಂದು ಅವರ ಮೇಲೆ ಅವನಿಗೆ ಕರುಣೆ ಬಂದಿತು. ಅವರಿಗೆ ಸಹಾಯ ಮಾಡಲು ಒಂಟೆ ಸವಾರನ ಕಾಲನ್ನು ಹಿಡಿದನು. ಕುದುರೆಯು ಅವನನ್ನು ಬಿಟ್ಟು ಮುಂದಕ್ಕೆ ಹೊರಟು ಹೋಯಿತು.

ಈಗ ಟೊಂಗೆಯ ಆಶ್ರಯದಲ್ಲಿ ನಾಲ್ವರಾದರು. ಕುದುರೆ ಸವಾರ ಪ್ರಾಣಭಯದಿಂದ ಸೋಮನನ್ನು ಕರೆದು 'ಅಯ್ಯಾ, ನೀನು ಟೊಂಗೆಯನ್ನು ಬಿಗಿಯಾಗಿ ಹಿಡಿದುಕೊಂಡಿರು. ಎಲ್ಲಿಯಾದರೂ ನೀನು ಕೈಯನ್ನು ಬಿಟ್ಟೆಯಾದರೆ ನಾವೆಲ್ಲರೂ ಹಳ್ಳದಲ್ಲಿ ಬಿದ್ದು ಸಾಯುತ್ತೇವೆ. ಅದ್ದರಿಂದ ನಾವೆಲ್ಲರೂ ಸುರಕ್ಷಿತವಾಗಿ ಇಳಿಯುವರೆಗೂ ಟೊಂಗೆಯನ್ನು ಬಿಗಿಯಾಗಿ ಹಿಡಿದುಕೊ. ಅದಕ್ಕಾಗಿ ನಾನು ನಿನಗೆ ಇನ್ನೂರು ರೂಪಾಯಿ ಕೊಡುತ್ತೇನೆ' ಎಂದನು.

ಕುದುರೆ ಸವಾರನ ಮಾತನ್ನು ಕೇಳಿ ಸೋಮನಿಗೆ ಬಹಳ ಖುಷಿಯಾಯಿತು. ತಾನು ಮರದಿಂದ ಇಳಿದ ಬಳಿಕ ಆನೆ ಸವಾರನಿಗೆ ನೂರು ರೂಪಾಯಿ ಕೊಟ್ಟರೂ ನೂರು ರೂಪಾಯಿ ತನಗೆ ಲಾಭವಿದ್ದೇ ಇರುತ್ತದೆ ಎಂದುಕೊಂಡ. ಅಷ್ಟರಲ್ಲೇ ಒಂಟೆ ಸವಾರ 'ಇನ್ನೂರು ರೂಪಾಯಿ ಎಂದರೆ ಎಷ್ಟು?' ಎಂದು ಸೋಮನಲ್ಲಿ ಕೇಳಿದ. ಸೋಮನು ತನ್ನನ್ನು ಹಿಡಿದುಕೊಂಡಿರುವವರನ್ನು ಮರೆತು ಇನ್ನೂರು ರೂಪಾಯಿಯೆಂದರೆ ಎಷ್ಟು ಎಂದು ಹೇಳಲು ಕೈಯಲ್ಲಿ ಹಿಡಿದ ಟೊಂಗೆಯನ್ನು ಬಿಟ್ಟನು. ಆಗ ಎಲ್ಲರೂ ಹಳ್ಳಕ್ಕೆ ಬಿದ್ದು ಸತ್ತು ಹೋದರು. ಜಿಪುಣತನದ ಬುದ್ಧಿಯಿಂದ ಸೋಮನೊಂದಿಗೆ ಮಾವುತ, ಒಂಟೆ ಸವಾರ ಮತ್ತು ಕುದುರೆ ಸವಾರ ಎಲ್ಲರೂ ಜೀವ ಕಳೆದುಕೊಳ್ಳಬೇಕಾಯಿತು.

■ **ವೇದಾವತಿ ಹೆಚ್.ಎಸ್.**



ಶಿಲ್ಪಾ ಕಬ್ಬಿಣಕಂತಿ

# ಮೃಗರಾಜನ ಕ್ವಾರಂಟೈನ್

ಮೃಗರಾಜನೊಂದು ದಿನ
ಕಾಯಿಲೆ ಬಿದ್ದುಬಿಟ್ಟನು
ಅಮ್ಮಾ.. ನೋವು ಎನುತ
ನರಳಿ ಬಳಲುತ್ತಿದ್ದನು

ವಿಷಯ ತಿಳಿದು ಪ್ರಾಣಿಗಳು
ಓಡಿ ಓಡಿ ಬಂದವು
ಕೊರೊನಾದ ಭಯದಿಂದ
ದೂರದಲ್ಲೇ ನಿಂತವು

ಪಿಸಿಪಿಸಿ ಗುಸುಗುಸು
ಮಾತನಾಡಿಕೊಂಡವು
ಮೂಗು ಬಾಯಿ ಮುಚ್ಚಿಕೊಂಡು
ಅಂತರ ಕಾಯ್ದುಕೊಂಡವು

ಕಾಡಿನ ವೈದ್ಯ ಗುಳ್ಳೇನರಿಯು
ನುಸುಳಿ ಮುಂದೆ ಬಂದಿತು
ಮುಖಗವಸು ಧರಿಸಿಕೊಂಡು
ರಾಜನ ಬಳಿ ಹೋಯಿತು

ನಾಡಿ ಹಿಡಿದು ಮೈಯ ಮುಟ್ಟಿ
ಕೊರೊನಾ ಖಚಿತಪಡಿಸಿತು
ಗುಹೆಯೊಳಗೆ ಕ್ವಾರಂಟೈನ್‌ಗೆ
ಸಲಹೆಯನ್ನು ನೀಡಿತು

ಸೊಪ್ಪುಸೆದೆ ನಾರುಬೇರು
ಹುಡುಕಿ ಕಿತ್ತು ತಂದಿತು
ಅರೆದು ಕಷಾಯ ತಯಾರಿಸಿ
ರಾಜನಿಗೆ ಕುಡಿಸಿತು

ಪ್ರಾಣಿಗಳೆಲ್ಲಾ ಅಲೆದಾಡಿ
ಆಹಾರ ಸಂಗ್ರಹಿಸಿ ತಂದವು
ಭಕ್ತಿಯಿಂದ ದೊರೆಗರ್ಪಿಸಿ
ಧೈರ್ಯ ಹೇಳಿ ಮರಳಿದವು

ಗುಹೆಯೊಳಗೆ ಮೃಗರಾಜ
ಮೆಲ್ಲ ಚೇತರಿಸಿಕೊಂಡನು
ಹದಿನಾಲ್ಕು ದಿನಗಳುರುಳಿ
ಹೊರಬಂದು ಗರ್ಜಿಸಿದನು

ಎಲ್ಲಾ ಪ್ರಾಣಿಗಳ ಕರೆಕಳಿಸಿ
ಧನ್ಯವಾದ ಹೇಳಿದನು
ಖುಷಿಯಿಂದ ಅಂದು ಸಂಜೆ
ಔತಣ ನೀಡಿ ಸತ್ಕರಿಸಿದನು

ಕೊರೊನಾದ ಲಸಿಕೆಯಿಂದ
ರಕ್ಷಣೆಯನ್ನು ಪಡೆದನು
ಇತರರಿಗೂ ಲಸಿಕೆ ಕೊಡಿಸಿ
ಮಾದರಿ ರಾಜನಾದನು

■ **ಡಾ. ಕೆ.ಬಿ. ರಂಗಸ್ವಾಮಿ**